ಅಧ್ಯಕ್ಷರು:- ಈ ಇಶ್ಯೂ ಕೂಡ ಸೇರಿಸಿ, ಉತ್ತರ ಕೊಡುವಂತೆ ಹೇಳುತ್ತೇನೆ, ಈಗ ಮುಂದಿನ ಪ್ರಶ್ನೆ.

ಬನ್ನೂರು ಕ್ಷೇತ್ರಕ್ಕೆ ಬಸ್ಸುಗಳ ಸಂಚಾರ

56 (200) ಶ್ರೀ ಎಸ್.ಕೃಷ್ಣಪ್ಪ (ಬನ್ನೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬನ್ನೂರು ಕ್ಷೇತ್ರಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊಸದಾಗಿ ಎಷ್ಟು ಬಸ್‌ನ್ನು ಹಾಕಲಾಗಿದೆ. ಆ ಬಸ್ಸುಗಳ ಮಾರ್ಗಗಳಾವುವು?

ಆ) ನಿಗದಿತ ಕಾಲಕ್ಕೆ ಆ ಬಸ್ಸುಗಳು ಸಂಚರಿಸುತ್ತಿವೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಬನ್ನೂರು ಕ್ಷೇತ್ರದಲ್ಲಿ ಮೂರು (3) ಬಸ್‌ಗಳನ್ನು ಕೆಳಕಂಡ ಮಾರ್ಗಗಳಲ್ಲಿ ಜುಲೈ 1997ರಿಂದ ಕಾರ್ಯಾಚರಣೆಗೊಳಿಸಲಾಗುತ್ತಿದೆ.

1. ಕನಕಪುರ-ಮೈಸೂರು ಮಾರ್ಗ ಬನ್ನೂರು
2. ಮೈಸೂರು-ಮಳವಳ್ಳಿ ಮಾರ್ಗ ಬನ್ನೂರು
3. ಮೈಸೂರು-ಬನ್ನೂರು-ದರ್ಗಾ
4. ಬನ್ನೂರು-ಮಂಡ್ಯ
5. ಮೈಸೂರು-ಮಂಡ್ಯ ಮಾರ್ಗ ಬನ್ನೂರು
6. ಮೈಸೂರು-ಬನ್ನೂರು ಮಾರ್ಗ ರಂಗಸಮುದ್ರ.

ಆ) ಹೌದು.

ಶ್ರೀ ಎಸ್. ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೇ, ನಾನು ಕಳುಹಿಸಿದ ಪ್ರಶ್ನೆ, ನಮ್ಮ ಕ್ಷೇತ್ರದಲ್ಲಿ ಭಾಗಶಃ ರಾಷ್ಟ್ರೀಕೃತವಾದಂಥ ಕ್ಷೇತ್ರ. ಬಹುಶಃ ಅಲ್ಲಿಂದ ರಾಷ್ಟ್ರೀಕರಣವಾಗದೇ ಇರತಕ್ಕ ರೂಟ್‌ಗಳಿಗೆ ಮೂರು ಬಸ್ಸುಗಳನ್ನು ಹಾಕಿಕೊಡಬೇಕೆಂದು ಸಾರಿಗೆ ಸಚಿವರಿಂದ ಶಿಫಾರಸ್ ಮಾಡಿಸಿ, ಕಳುಹಿಸಿಕೊಟ್ಟಿದ್ದೆ. ಅವರು ಕರೆದಂಥ ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ಕೂಡ ಕೊಟ್ಟಾಗ, ಬಸ್ಸುಗಳನ್ನು ಹಾಕಿಸಿಕೊಡುತ್ತೇನೆಂಬ ಮಾತನ್ನು ಹೇಳಿದರು. ಇಲ್ಲಿ ಜುಲೈ 1997 ರಿಂದ 6 ಬಸ್ಸುಗಳನ್ನು ಹಾಕಿದ್ದೇವೆಂದು ಹೇಳಿದ್ದಾರೆ. ಇದು ರಾಷ್ಟ್ರೀಕರಣ ಮಾರ್ಗದಲ್ಲಿ ಟ್ರಾಫಿಕ್ ಜಾಸ್ತಿಯಾಗಿ ಹಾಕಿರತಕ್ಕಂಥದ್ದು, ಆದರೆ, ನಾನು ಕೇಳಿರತಕ್ಕಂಥ ಪ್ರಶ್ನೆ ದೇಶವಳ್ಳಿ,

ಕೆಂಪೇಗೌಡನ ಕೊಪ್ಪಲು, ಹನುಮನಾಳು ಮತ್ತು ನೇರಲೇಕೆರೆ ಮುಖಾಂತರ ಮಂಡ್ಯಕ್ಕೆ ಹೋಗಬೇಕು. ಇದನ್ನು ನಾನು ಕೇಳಿದ್ದೆ. ಆ ರೂಟ್ಸ್‌ಗಳನ್ನು ಕ್ಲೀನ್ ಆಗಿ ಕೊಟ್ಟಿಲ್ಲ. ನಾನು ಪದೇ ಪದೇ ಡಿವಿಜನಲ್ ಕಂಟ್ರೋಲರ್ ಅವರ ಮನೆಗೆ ಹೋಗಿ ಕೇಳಿದ್ದೇನೆ ಮತ್ತು ಆಫೀಸಿಗೆ ಹೋಗಿ ಕೇಳಿದ್ದೇನೆ. ಹಾಕಿದ್ದೇವೆಂದು ಹೇಳಿ, ಕಲೆಕ್ಷನ್ ಆಗುವುದಿಲ್ಲವೆಂದು ಬಸ್ಸುಗಳನ್ನು ಸರಿಯಾಗಿ ಓಡಿಸಲಿಲ್ಲ. ಬಹಳ ಉದಾಸೀನವಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಸಭೆಯಲ್ಲೂ ಅವರನ್ನು ಕೇಳಿದ್ದೇನೆ. ಬರೀ ಸುಳ್ಳು ಸುಳ್ಳು ಮಾಹಿತಿ ಕೇಳುತ್ತಾರೆ. ಮಾನ್ಯ ಸಚಿವರಿಂದ ಅವರಿಗೆ ಎರಡು ಸಾರಿ ಎಚ್ಚರಿಕೆಯನ್ನು ಕೊಡಿಸಿದ್ದೇನೆ. ಅಲ್ಲಿಯ ಅಧಿಕಾರಿಯ ಬೇಜವಾಬ್ದಾರಿಯಿಂದ ಸಾರ್ವಜನಿಕರು ಆ ರೂರ್ಟ್‌ನಲ್ಲಿ ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಮಾನ್ಯ ಸಚಿವರು ಖಂಡಿತವಾಗಿಯೂ ಇದನ್ನು ಮಾಡಿಕೊಡಬೇಕೆಂದು ತಮ್ಮ ಮುಖಾಂತರ, ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಬನ್ನೂರು ಕ್ಷೇತ್ರಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊಸದಾಗಿ ಎಷ್ಟು ಬಸ್ಸುಗಳನ್ನು ಹಾಕಿದ್ದೀರಿ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು, ಕೇಳಿದ್ದಾರೆ. 1997ನೇ ಜುಲೈ ನಿಂದ, ಒಂದು ವರ್ಷದಲ್ಲಿ 6 ರೂಟ್‌ಗಳನ್ನು ಹಾಕಿದ್ದೇವೆಂಬ ಮಾತನ್ನು ನಾವು ಹೇಳಿದ್ದೇವೆ. ಅವರು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಸರಿಯಾಗಿರುತ್ತದೆ. ಎರಡನೆಯದಾಗಿ ಅವರು ಖಾಸಗಿಯಾಗಿ ನನ್ನನ್ನು ಭೇಟಿ ಮಾಡಿ, ರಾಷ್ಟ್ರೀಕರಣ ಆಗದೇ ಇರತಕ್ಕ ಪ್ರೈವೇಟ್ ಜಾಗ ಎಲ್ಲಿದೆ, ಪ್ರೈವೇಟ್ ರೂಟ್ಸ್ ಹೋಗುವ ಕಡೆ, ಅಲ್ಲಿ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಹಾಕಬೇಕೆ ಎನ್ನುವಂತಾದ್ದನ್ನು ಅವರು ಎರಡು ಸಾರಿ ಡಿವಿಜನಲ್ ಕಂಟ್ರೋಲರ್ ಅವರನ್ನು ಭೇಟಿ ಮಾಡಿ ಹೇಳಿದ್ದಾರೆ. ಡಿವಿಜನಲ್ ಕಂಟ್ರೋಲರ್‌ಗೆ ಅದನ್ನು ಇಂಪ್ಲಿಮೆಂಟ್ ಮಾಡಲು ನಾನು ಕೂಡ ಹೇಳಿದ್ದೇನೆ.

ಅಧ್ಯಕ್ಷರು:- ಮಾನ್ಯ ಕೃಷ್ಣಪ್ಪನವರದ್ದು ಮತ್ತು ನನ್ನ ಕ್ಷೇತ್ರದ್ದು ಒಂದೇ ಸಮಸ್ಯೆಯಾಗಿದೆ. ಮೊದಲು ನೀವು ಸಾರಿಗೆ ಸಚಿವರಾಗಿದ್ದಾಗ ನಿಮ್ಮ ಆರ್ಡರ್ ಬಹಳ ಚುರುಕಾಗಿ ಜಾರಿಗೆ ಬರುತ್ತಿತ್ತು, ಅದರೆ ಈಗ ಹಾಗೆ ಆಗುವುದಿಲ್ಲ ಏಕೆ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಹಾಗೇನು ಇಲ್ಲ. ಮೈಸೂರುನಿಂದ ಟಿ. ನರಸಿಪುರ, ವಯಾ ಬನ್ನೂರು ಇಲ್ಲಿ ಡೆಪ್ಯೂಟಿ ಕಮಿಷನ್‌ರವರಿಗೆ ಹೇಳಿ 8 ಟ್ರಿಪ್‌ಗಳಿಗೆ ಆದೇಶ ಕೊಡಲಾಗಿತ್ತು. ಈಗಾಗಲೇ ಅಲ್ಲಿ ಬಸ್‌ಗಳು ಓಡಾಡುತ್ತಿವೆ. ಕೆಲವು ರೂಟ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ಆ ರೂಟ್‌ಗಳನ್ನು ಮಾಡಬೇಕಾದರೆ ಕೆ.ಎಸ್.ಆರ್.ಟಿ.ಸಿ ಯವರು ಪರ್ಮಿಟ್‌ಗಳನ್ನು ನಡೆಸಬೇಕಾಗುತ್ತದೆ. ಇದರ ಬಗ್ಗೆ ಮೂರು ದಿವಸಗಳ ಹಿಂದೆ ಡಿವಿಜನಲ್ ಕಂಟ್ರೋಲರ್ ಜೊತೆ ಮಾತನಾಡಿದ್ದೇನೆ. ಮುಂದಿನ ಆರ್‌ಟಿಎ ಮೀಟಿಂಗ್‌ನಲ್ಲಿ ಅದನ್ನು ಕನ್‌ಸಿಡರ್ ಮಾಡಿಕೊಳ್ಳುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ.

ಶ್ರೀ ಎಸ್.ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೇ, ಪರ್ಮಿಟ್‌ಗಳನ್ನು ತೆಗೆದುಕೊಂಡಿದ್ದಾರೆ. ಬಸ್‌ಗಳನ್ನು ವಾರಕ್ಕೆ ಒಂದು ದಿವಸ ಒಂದೊಂದು ಟ್ರಿಪ್ ಓಡಿಸುತ್ತಾರೆ. ಪರ್ಮಿಟ್ ತೆಗೆದುಕೊಂಡಿಲ್ಲ ಎಂದರೆ ಈ ಸದನದಲ್ಲಿ ಈ ತಾವು ಹೇಳಿದ ಹಾಗೆ ಕೇಳುತ್ತೇನೆ.

ಅಧ್ಯಕ್ಷರು:- ಮಾನ್ಯ ಸಚಿವರು ಏನು ವ್ಯತ್ಯಾಸ ಆಗಿಲ್ಲ ಎಂದು ಹೇಳಿದ್ದಾರೆ. ಈಗ ಏನು ಮಾಡುವುದು? ನಮ್ಮಲ್ಲಿಯೂ ಇದೇ ತೊಂದರೆಯನ್ನು ಅನುಭವಿಸುತ್ತಿದ್ದೇವೆ.

ಶ್ರೀ ಎಸ್.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೇ, ತಾವು ಹೀಗೆ ಹೇಳಿದರೆ ನಮ್ಮ ಜನರಿಗೆ ಏನು ಉತ್ತರವನ್ನು ಹೇಳಬೇಕು? ತಮ್ಮ ಭೇಂಬರಿಗೆ ಡಿ.ಸಿ. ಯವರನ್ನು ಕರೆದು ಕೇಳಿ, ಅವರು ಪರ್ಮಿಟ್‌ಗಳನ್ನು ತೆಗೆದುಕೊಂಡಿದ್ದರೂ ಬಸ್‌ಗಳನ್ನು ಓಡಿಸುತ್ತಿಲ್ಲ. ನಾವು ಆಡಳಿತ ಪಕ್ಷದಲ್ಲಿದ್ದುಕೊಂಡು ಮಾಡುವುದಕ್ಕೆ ಆಗುವುದಿಲ್ಲ ಅಂದರೆ ಹೇಗೆ?

ಅಧ್ಯಕ್ಷರು:- ಬಸ್‌ಗಳನ್ನು ಓಡಿಸುವುದಕ್ಕೆ ಒಪ್ಪಿಕೊಂಡಿದ್ದಾರೆ.

ಚಾಮರಾಜನಗರಕ್ಕೆ ಬಸ್ಸ್ ಡಿಪೋ

57 (201) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದಲ್ಲಿ ಸಾರಿಗೆ ಸಂಸ್ಥೆಯ ಡಿಪೋ ತೆರೆಯದಿರಲು ಕಾರಣವೇನು?

ಆ) ಈ ಬಗ್ಗೆ ಸರ್ಕಾರಕ್ಕೆ ಅನೇಕ ಬಾರಿ ಮನವಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಿಂದುಳಿದ ಗದಿ ಪ್ರದೇಶಕ್ಕೆ ಮೊದಲನೇ ಆದ್ಯತೆ ಕೊಡಬೇಕೆನ್ನುವುದು ಸರ್ಕಾರದ ನೀತಿಯಲ್ಲವೇ:

ಈ) ಕರ್ನಾಟಕ ರಾಜ್ಯಾದ್ಯಂತ ಎಷ್ಟು ಸಾರಿಗೆ ಜಪೋಗಳಿವೆ?

ಉ) ಈಗ ಎಷ್ಟು ಸಾರಿಗೆ ಡಿಪೋಗಳನ್ನು ತೆರೆಯಲು ಅನುಮತಿ ನೀಡಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಚಾಮರಾಜನಗರವು ರಾಷ್ಟ್ರೀಕೃತವಲ್ಲದ ಪ್ರದೇಶವಾಗಿರುವುದರಿಂದ, ಸಾರಿಗೆ ಘಟಕವನ್ನು ನಿರ್ಮಿಸಲಾಗಿಲ್ಲ.

ಆ) ಇಲ್ಲ.

ಇ) ಹೌದು

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹಾಲಿ 110 ಘಟಕಗಳಿರುತ್ತದೆ.

ಉ) 1998-99ರಲ್ಲಿ 17 ಘಟಕಗಳನ್ನು ಪ್ರಾರಂಭಿಸುವ ಯೋಜನೆ ಇದೆ.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಸಾರಿಗೆ ಸಚಿವರು ಆಗುವುದಕ್ಕೆ ಮುಂಚೆ ಚಾಮರಾಜನಗರದಲ್ಲಿ ಐದು ಸಿಟಿ ಬಸ್‌ಗಳು ಓಡಾಡುತ್ತಿದ್ದವು.